4

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE 19/2/2021

# ಮೀಸಲಾತಿ ದೊಣ್ಣೆಗೆ ಹಳೇ ಗುರಾಣಿ

**ಕಾನೂನು ತಜ್ಞರ ಜತೆ ಸಮಾಲೋಚನೆಗೆ ಸಂಪುಟ ತೀರ್ಮಾನ**

ಸಂ.ಕ.ಸಮಾಚಾರ ಬೆಂಗಳೂರು 19/2/21

ರಾಜ್ಯದಲ್ಲಿ ಪಂಚಮಸಾಲಿ, ಕುರುಬ ಹಾಗೂ ವಾಲ್ಮೀಕಿ ಜನಾಂಗಗಳು ಸೇರಿದಂತೆ ಹಲವಾರು ಸಮುದಾಯಗಳು ಸರ್ಕಾರದ ಮುಂದಿಟ್ಟಿರುವ ಮೀಸಲಾತಿ ಬೇಡಿಕೆಗಳಿಗೆ ಸಂಬಂಧಿಸಿದಂತೆ ಸಂವಿಧಾನ ತಜ್ಞರು ಹಾಗೂ ಕಾನೂನು ಪಂಡಿತರ ಬಳಿ ಹೋಗಲು ನಿರ್ಧರಿಸಿರುವ ರಾಜ್ಯ ಸರ್ಕಾರ, ಸದ್ಯ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳುವ ಪ್ರಯತ್ನಕ್ಕೆ ಮುಂದಾಗಿದೆ.

ಗುರುವಾರ ಸಂಜೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಮೀಸಲಾತಿ ವಿಚಾರವಾಗಿ ಒಂದು ಗಂಟೆಗೂ ಅಧಿಕ ಸಮಯ ಅನೌಪಚಾರಿಕ ಚರ್ಚೆ ನಡೆದಿದ್ದು, ಸಂಪುಟದ ಸದಸ್ಯರ ಸಲಹೆ-ಸೂಚನೆ ಆಲಿಸಿದ ಬಳಿಕ ಕಾನೂನು ತಜ್ಞರ ಜೊತೆ ಚರ್ಚಿಸಲು ನಿರ್ಧರಿಸಲಾಗಿದೆ.

ಸಂಪುಟ ಸಭೆಯ ಬಳಿಕ ಸುದ್ದಿಗಾರರಿಗೆ ಮಾಹಿತಿ ನೀಡಿದ ಕಾನೂನು, ಸಂಸದೀಯ ವ್ಯವಹಾರ ಹಾಗೂ ಗೃಹ ಸಚಿವ ಬಸವರಾಜ ಬೊಮ್ಮಾಯಿ, ಮೀಸಲಾತಿ ವಿಚಾರವಾಗಿ ಗಹನವಾದ ಚರ್ಚೆ ನಡೆದಿದ್ದು, ಕಾನೂನು ಪಂಡಿತರ ಜತೆ ಸಭೆ ನಡೆಸಿದ ಬಳಿಕ ಮತ್ತೊಮ್ಮೆ ಸಂಪುಟದಲ್ಲಿ ಚರ್ಚಿಸುವ ತೀರ್ಮಾನವನ್ನು ಸಿಎಂ ಯಡಿಯೂರಪ್ಪ ತೆಗೆದುಕೊಂಡಿದ್ದಾರೆ ಎಂದು ಹೇಳಿದರು.


ರಾಜ್ಯದ ವಿವಿಧ ಸಮುದಾಯಗಳು ಮೀಸಲಾತಿ ಬೇಡಿಕೆಗೆ ಸಂಬಂಧಿಸಿದಂತೆ ನೇರವಾಗಿ ಸರ್ಕಾರಕ್ಕೆ ಇಲ್ಲವೇ ಹಿಂದುಳಿದ ವರ್ಗಗಳ ಆಯೋಗಕ್ಕೆ ಕಾಲಕಾಲಕ್ಕೆ ಮನವಿ ಸಲ್ಲಿಸುತ್ತ ಬಂದಿದ್ದಾರೆ. ಈ ಬಗ್ಗೆ ಕೆಲವು ಮಠಾಧೀಶರು ಹೋರಾಟಗಳನ್ನು ಕೂಡ ಮಾಡುತ್ತಿದ್ದಾರೆ. ಈ ಎಲ್ಲ ವಿಚಾರಗಳ ಸಾಧಕ-ಬಾಧಕಗಳ ಕುರಿತಂತೆ ತಜ್ಞರ ಸಭೆ ಕರೆದು ಚರ್ಚಿಸಬೇಕು, ಮಾತ್ರವಲ್ಲದೇ ಸಂವಿಧಾನಾತ್ಮಕವಾಗಿ ತೀರ್ಮಾನ ತೆಗೆದುಕೊಳ್ಳುವ ಮೊದಲು ಈಗಾಗಲೇ ಹಲವಾರು ಆಯೋಗಗಳು, ಸಮಿತಿಗಳು ಮತ್ತು ಸುಪ್ರಿಂ ಕೋರ್ಟ್ ತೀರ್ಪುಗಳು ಬಂದಿರುವುದನ್ನು ಕೂಡ ಪರಾಮರ್ಶೆಗೆ ಒಳಪಡಿಸಿ ನಂತರ ಸಂಪುಟದಲ್ಲಿ ಚರ್ಚಿಸಬೇಕಾಗಿದೆ.

ನ್ಯಾಯಸಮ್ಮತ ಬೇಡಿಕೆಗಳನ್ನು ಈಡೇರಿಸಲು ವಿವಿಧ ಹಂತದಲ್ಲಿ ಚರ್ಚೆಗೆ ಒಳಪಡಿಸಬೇಕೆಂಬುದನ್ನು ಸಂಪುಟ ಮನಗಂಡಿದೆ. ಸಿಎಂ ಯಡಿಯೂರಪ್ಪ ಕೂಡ ಎಲ್ಲ ವಿಚಾರಗಳನ್ನು ಮತ್ತೊಮ್ಮೆ ಸಂಪುಟದ ಮುಂದೆ ತರುವುದಾಗಿ ತಿಳಿಸಿದ್ದಾರೆ ಎಂದರು.

- ಸಂವಿಧಾನದ ಚೌಕಟ್ಟಿನಲ್ಲಿ ಜಾತಿ ಮೀಸಲಾತಿ ಪರಾಮರ್ಶೆ
- ಸಚಿವ ಸಂಪುಟದಲ್ಲಿ ಮೀಸಲಾತಿ ಬೇಡಿಕೆ ಬಗ್ಗೆ ಸುದೀರ್ಘ ಚರ್ಚೆ
- ಕಾನೂನು ತಜ್ಞರ ಜತೆ ಸಭೆ ನಡೆಸಿ ಸಂಪುಟದಲ್ಲಿ ಮಂಥನ
- ಕುರುಬ ಸಮಾಜದ ಕುಲಶಾಸ್ತ್ರೀಯ ಅಧ್ಯಯನ ಜಾರಿ

## ಮಾರ್ಚ್ 8ಕ್ಕೆ ಬಜೆಟ್

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮಾರ್ಚ್ 8ರಂದು ಸೋಮವಾರ 2021-2022ನೇ ಸಾಲಿನ ರಾಜ್ಯ ಮುಂಗಡ ಪತ್ರ ಮಂಡಿಸಲಿದ್ದು, ಈ ಬಾರಿ 26 ದಿನಗಳ ಕಾಲ ಬಜೆಟ್ ಅಧಿವೇಶನ ನಡೆಯಲಿದೆ.



ಸಿಎಂ ಯಡಿಯೂರಪ್ಪ ತಮ್ಮ ರಾಜಕೀಯ ಬದುಕಿನಲ್ಲಿ ಎಂಟನೇ ಬಾರಿ ಬಜೆಟ್ ಮಂಡನೆ ಮಾಡಲಿದ್ದು, ಕೊರೊನಾ ಸಂಕಷ್ಟದ ನಂತರ ಮಂಡಿಸುತ್ತಿರುವ ಬಜೆಟ್ ಬಗೆಗೆ ಭಾರಿ ನಿರೀಕ್ಷೆಗಳಿವೆ. ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಬಜೆಟ್ ಮಂಡನೆ ಹಾಗೂ ಅಧಿವೇಶನ ಕುರಿತಂತೆ ತೀರ್ಮಾನ ತೆಗೆದುಕೊಳ್ಳಲಾಯಿತು.

ಮಾರ್ಚ್ 4 ಮತ್ತು 5ರಂದು ಎರಡು ದಿನಗಳ ಕಾಲ ಒಂದು ದೇಶ-ಒಂದು ಚುನಾವಣೆ ಕುರಿತಂತೆ ಚರ್ಚೆ ನಡೆಯಲಿದೆ. ಮಾ.8ರಂದು ಸೋಮವಾರ ಸಿಎಂ ಯಡಿಯೂರಪ್ಪ ಬಜೆಟ್ ಮಂಡಿಸಲಿದ್ದು, ಮಾ.31ರ ತನಕ ಅಧಿವೇಶನ ಮುಂದುವರಿಯಲಿದೆ.

ರಾಜ್ಯದಲ್ಲಿ ಈಗಾಗಲೇ 13 ಬಾರಿ ಬಜೆಟ್ ಮಂಡಿಸಿರುವ ಸಿದ್ದರಾಮಯ್ಯ ಅತಿ ಹೆಚ್ಚು ಬಜೆಟ್ ಮಂಡನೆಯ ದಾಖಲೆ ಹೊಂದಿದ್ದಾರೆ. ಈ ಬಾರಿ ಎಂಟನೇ ಬಜೆಟ್ ಮಂಡಿಸಲಿರುವ ಯಡಿಯೂರಪ್ಪ ಹಳೇ ಮೈಸೂರು ಭಾಗದ 32ನೇ ಹಣಕಾಸು ಸಚಿವರು ಎಂಬ ಕೀರ್ತಿಗೆ ಭಾಜನರಾಗಿದ್ದಾರೆ. 1956ರಿಂದ ಈವರೆಗೆ ರಾಜ್ಯ ಒಟ್ಟು 65 ಬಾರಿ ಬಜೆಟ್‌ಗಳನ್ನು ಕಂಡಿದೆ. ಅಂದಹಾಗೆ, ಕರ್ನಾಟಕದ ರಾಜ್ಯಪಾಲ ವಿ.ಆರ್.ವಾಲಾ ತಮ್ಮ ಸ್ವಂತ ರಾಜ್ಯವಾದ ಗುಜರಾತ್‌ನಲ್ಲಿ 18 ಬಾರಿ ಬಜೆಟ್ ಮಂಡನೆಯ ದಾಖಲೆ ಹೊಂದಿದ್ದಾರೆ.